ಇ) ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ ಈ ಬಗ್ಗೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದಲ್ಲಿ ಡೈರಿ ಏಜೆಂಟರುಗಳಿಗೆ ಕಮೀಷನ್ ಹೆಚ್ಚಿಸುವ ಬಗ್ಗೆ.

146 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿರುವ ಒಟ್ಟು ಬೆಂಗಳೂರು ಡೈರಿ ಹಾಲಿನ ಏಜೆಂಟರುಗಳ ಸಂಖ್ಯೆ ಎಷ್ಟು ?*

ಆ) *ಆ ಏಜೆಂಟರುಗಳಿಗೆ ಒಂದು ಲೀಟರ್ ಹಾಲಿಗೆ ನೀಡುವ ಕುಷನ್ ದರ ಎಷ್ಟು.*

ಇ) *ಆ ಏಜೆಂಟರುಗಳಿಂದ ಒಡೆದು ಹೋದ ಪ್ಯಾಕೇಟ್ಗಳನ್ನು ವಾಪಸ್ಸು ತೆಗೆದುಕೊಳ್ಳದೇ ಇರುವುದು ನಿಜವಲ್ಲವೇ.*

ಈ) *ಆದರಿಂದ ಏಜೆಂಟರುಗಳು ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

ಉ) *ಏಜೆಂಟರುಗಳಿಗೆ ನೀಡುವ ಕಮೀಷನ್ ದರವನ್ನು ಲೀಟರ್ಗೆ 0.25 ಪೈಸೆಗೆ ಏರಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ?*

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) 625

ಆ) ರೂ. 0.15 ಲೀಟರ್ಗೆ

ಇ) ಏಜೆಂಟರುಗಳಿಗೆ ಹಾಲನ್ನು ಶುದ್ಧವಾದ ಪ್ಯಾಕೆಟ್ಗಳಲ್ಲಿ ಸರಬರಾಜು ಮಾಡುತ್ತಿರುವುದರಿಂದ ಹಿಂದಿರುಗಿಸಲಾದ ಒಡೆದು ಹೋದ ಪ್ಯಾಕೆಟ್ಗಳನ್ನು ಸ್ವೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ.

ರದ್ದು ಪಡಿಸಲಾದ ಬಲ್ಕ್ ವೆಂಡಿಂಗ್ ಬೂತ್ಗಳ ರಿಯಾಯತಿದಾರರಿಗೆ ಇವರು ಮದರ್ ಡೈರಿಗೆ ಕಟ್ಟಿದ ಠೇವಣಿ ಹಣಕ್ಕೆ ಬಡ್ಡಿ ಕೊಡುವಲ್ಲಿ ವಿಳಂಬ ಆಗಿರುವ ಬಗ್ಗೆ.

113 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 2 ವರ್ಷಗಳಲ್ಲಿ (ಜನವರಿ 20,1994ರ ವರೆವಿಗೆ) ಮದರ್ ಡೈರಿಯವರು ಕಲಬೆರೆಕೆ ಆಧಾರದ ಮೇಲೆ ಎಷ್ಟು ಬಲ್ಕ್ ವೆಂಡಿಂಗ್ ಬೂತುಗಳ ರಿಯಾಯಿತಿದಾರಿಕೆಗಳನ್ನು ಬದಲಾಯಿಸಿದ್ದಾರೆ. (ಈ ರಿಯಾಯತಿದಾರಿಕೆದಾರರ ಹೆಸರು ವಿಳಾಸಗಳನ್ನು ಒದಗಿಸುವುದು)*

ಆ) *ಈಗ ಆ ಬೂತುಗಳನ್ನು ಯಾರ್ಯಾರಿಗೆ ನೀಡಲಾಗಿದೆ; (ಹೆಸರು ವಿವರಗಳನ್ನು ಒದಗಿಸುವುದು)*

ಇ) *ರದ್ದುಪಡಿಸಲಾದ ಬೂತುಗಳಲ್ಲಿ ಹಿಂದಿನ ರಿಯಾಯತಿದಾರರು ಮದರ್ ಡೈರಿಯ ಹೆಸರಿನಲ್ಲಿ ಇಟ್ಟಿದ್ದ ಠೇವಣಿ ಹಣವ ಮೊತ್ತವೆಷ್ಟು (ಪ್ರತಿಯೊಂದು ಬೂತಿನ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು);*